ಪೂರ್ವ ಉಚ್ಚ ಪ್ರಾಥಮಿಕ ಶಿಷ್ಯವೃತ್ತಿ ಪರೀಕ್ಷೆ (5 ನೇ ಇಯತ್ತೆ), ಫೆಬ್ರುವರಿ 2023

ಆಸನ ಕ್ರಮಾಂಕ- | | | | | | | | | | |

ಸಂಚ- **A**

0 8 0 1

ಪೇಪರ್ ಕ್ರ - I

ಮಾಧ್ಯಮ - ಕನ್ನಡ

ಸಮಯ : 11:00 ರಿಂದ 12:30

ಪ್ರಥಮ ಭಾಷೆ ಮತ್ತು ಗಣಿತ

ಒಟ್ಟು ಗುಣಗಳು : 150

ಪುಟಗಳು : 32

ಪ್ರಶ್ನೆ ಪತ್ರಿಕೆ ಬಿಡಿಸುವುದಕ್ಕಿಂತ ಮುಂಚೆ ಕೆಳಗಿನ ಸೂಚನೆಗಳು ಎಚ್ಚರಿಕೆಯಿಂದ ಓದಿರಿ.

(1) ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ವಿಭಾಗಗಳಿವೆ. ವಿಭಾಗ **I** ರಲ್ಲಿ ಪ್ರಥಮ ಭಾಷೆಯ **1** ರಿಂದ **25** ಪ್ರಶ್ನೆಗಳಿವೆ ಮತ್ತು ವಿಭಾಗ **II** ರಲ್ಲಿ ಗಣಿತದ **26** ರಿಂದ **75** ಪ್ರಶ್ನೆಗಳಿವೆ. ಹೀಗೆ **75** ಪ್ರಶ್ನೆಗಳು ಇದ್ದು ಎಲ್ಲ ಪ್ರಶ್ನೆಗಳು ಬಿಡಿಸುವುದು ಅವಶ್ಯಕವಾಗಿದೆ.

(2) ಪ್ರತಿಯೊಂದು ಪ್ರಶ್ನೆಗೆ **2** ಗುಣಗಳಿವೆ.

(3) ಪ್ರಶ್ನೆ ಪತ್ರಿಕೆ ಬಿಡಿಸಲು ಒಟ್ಟು **90** ನಿಮಿಷಗಳ ಕಾಲಾವಧಿ ಕೊಡಲಾಗಿದೆ.

(4) ಉತ್ತರಗಳನ್ನು ನೊಂದಾಯಿಸುವ ಸಲುವಾಗಿ ಸ್ವತಂತ್ರ ಉತ್ತರ ಪತ್ರಿಕೆ ಕೊಡಲಾಗಿದೆ. ಪ್ರತಿಯೊಂದು ಪ್ರಶ್ನೆ ಕ್ರಮಾಂಕದ ಮುಂದೆ ನಾಲ್ಕು ಪರ್ಯಾಯವಿರುವ ವರ್ತುಳಗಳನ್ನು ಕೊಡಲಾಗಿದೆ. ಅದರಲ್ಲಿ ಯೋಗ್ಯ ಉತ್ತರವಿರುವ ಪರ್ಯಾಯ ಕ್ರಮಾಂಕದ ವರ್ತುಳವನ್ನು ಉದಾಹರಣೆಯಲ್ಲಿ ತೋರಿಸಿದಂತೆ ನೊಂದಾಯಿಸಿರಿ. ಉದಾ – ಪ್ರಶ್ನೆ ಕ್ರಮಾಂಕ 6ರ ಉತ್ತರ 2 ಆದರೆ ಕೆಳಗೆ ತೋರಿಸಿದಂತೆ ವೃತ್ತವನ್ನು ಪೂರ್ಣವಾಗಿ ತುಂಬಿರಿ.

ಉದಾ. ಪ್ರಶ್ನೆ ಕ್ರ. **6** - ① ● ③ ④

(5) ಕೆಳಗಿನಂತೆ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವದಿಲ್ಲ.

① ② ⊙ ④

(6) ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವರ್ತುಳಗಳಲ್ಲಿ ನೊಂದಾಯಿಸಿದ ಉತ್ತರಗಳು, ತಿದ್ದುಪಡಿ ಮಾಡಿ ನೊಂದಾಯಿಸಿದ ಉತ್ತರಗಳು ಗಮನಕ್ಕೆ ತೆಗೆದುಕೊಳ್ಳಲಾಗುವದಿಲ್ಲ.

(7) ಒಮ್ಮೆ ನೊಂದಾಯಿಸಿದ ಉತ್ತರ ಬದಲಾಯಿಸಲು ಬರುವುದಿಲ್ಲ.

(8) ಪರ್ಯಾಯದ ಉತ್ತರ ಕ್ರಮಾಂಕಗಳನ್ನು ಕಪ್ಪು ಅಥವಾ ನೀಲಿ ಬಾಲ್ ಪೆನ್ನಿನಿಂದ ನೊಂದಾಯಿಸಬೇಕು. ಪೆನ್ಸಿಲಿನಿಂದ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವುದಿಲ್ಲ.

(9) ಪ್ರಶ್ನೆ ಪತ್ರಿಕೆಯ ಪ್ರತಿಯೊಂದು ಪುಟದ ಕೆಳಗೆ ಮತ್ತು ಕೊನೆಯ ಪುಟದ ಮೇಲೆ ಕಚ್ಚಾ ಕೆಲಸಕ್ಕಾಗಿ ಖಾಲಿ ಸ್ಥಳವನ್ನು ಬಿಡಲಾಗಿದೆ ಅಲ್ಲಿಯೇ ಕಚ್ಚಾ ಕಾರ್ಯ ಮಾಡಬೇಕು.

(10) ಪರೀಕ್ಷೆಗೆ ಮರ್ಯಾದಿತ ವೇಳೆ ಇರುವುದರಿಂದ ಒಂದು ಪ್ರಶ್ನೆಯ ಉತ್ತರ ನಿಮಗೆ ಬರದಿದ್ದರೆ, ಮುಂದಿನ ಪ್ರಶ್ನೆ ಬಿಡಿಸಿರಿ. ಕೊನೆಗೆ ವೇಳೆ ಇದ್ದರೆ ಉಳಿದ ಪ್ರಶ್ನೆಗಳ ಬಗ್ಗೆ ಪುನಃ ಪ್ರಯತ್ನ ಮಾಡಿರಿ.

(11) ಯಾವುದೇ ಪ್ರಶ್ನೆಯಲ್ಲಿ ತಪ್ಪು/ ದೋಷಗಳಿದ್ದರೆ ಅದರ ಬಗ್ಗೆ ಪರ್ಯವೇಕ್ಷಕ ಅಥವಾ ಪರೀಕ್ಷೆ ಕೇಂದ್ರ ಸಂಚಾಲಕರ ಕಡೆ ವಿಚಾರಣೆ ಮಾಡಬಾರದು.

(12) ಪ್ರಶ್ನೆಯಲ್ಲಿಯ ಯಾವುದೇ ದೋಷ/ತಪ್ಪು/ ಆಕ್ಷೇಪಣೆ ಬಗ್ಗೆ ನಿಮ್ಮ ಲಿಖಿತ ನಿವೇದನೆಯನ್ನು ಶಾಲೆಯವರು ಅಥವಾ ಪಾಲಕರು ಗಟಶಿಕ್ಷಣಾಧಿಕಾರಿ ಅಥವಾ ಶಿಕ್ಷಣಾಧಿಕಾರಿಯವರಿಗೆ ಕಳುಹಿಸಬಾರದು. ಆಯಾ ಶಾಲೆಯ ಲಾಗಿನ್ ನಿಂದ ಆನ್‌ಲೈನ್ ನೊಂದಾಯಿಸಬೇಕು.

(13) MSCE ವೆಬ್‌ಸೈಟ್‌ನಲ್ಲಿ ಮಧ್ಯಂತರ ಉತ್ತರ ಸೂಚಿ ಪ್ರಕಟಿಸಿದ **10** ದಿನಗಳಲ್ಲಿ ದೋಷ/ತಪ್ಪು/ಆಕ್ಷೇಪಣೆ/ಸಮಸ್ಯೆಗಳನ್ನು ಆನ್‌ಲೈನ್‌ನಲ್ಲಿ ನೊಂದಾಯಿಸಬೇಕು.

(14) ಮುದ್ರಣ ದೋಷ ಅಥವಾ ಅನ್ಯ ಕಾರಣಗಳಿಂದ ಪ್ರಶ್ನೆ ತಪ್ಪು ಎಂದು ಕಂಡು ಬಂದರೆ ತಜ್ಞ ಸಮಿತಿಯ ಅಭಿಪ್ರಾಯಕ್ಕೆ ಅನುಸಾರವಾಗಿ ಅದನ್ನು ರದ್ದು ಮಾಡಲಾಗುವುದು.

(15) ಮೂಲ ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲೀಷ್ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆ ಕೊಡಲಾಗಿದೆ, ಮೂಲ ಕನ್ನಡ ಮಾಧ್ಯಮದಲ್ಲಿಯ ಸಂದಿಗ್ಧ ಪ್ರಶ್ನೆಯ ಬಗ್ಗೆ ಇಂಗ್ಲೀಷ್ ಪ್ರಶ್ನೆ ನೋಡಿರಿ.

ವಿಭಾಗ - I

ಪ್ರಥಮಭಾಷೆ

ಪ್ರಶ್ನೆ ಕ್ರಮಾಂಕ 01 ರಿಂದ 03ರ ಸಲುವಾಗಿ ಸೂಚನೆ:

ಕೆಳಗಿನ ಗದ್ಯಭಾಗವನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯಗಳಿಂದ ಆರಿಸಿರಿ.

ದುರ್ಗಾವತಿಯು ಮಹೋಬಾ ರಾಜನ ಮಗಳಾಗಿದ್ದಳು. ಗಡಮಂಡಲ ರಾಜನ ಸಹಧರ್ಮಿಣಿಯೆ ರಾಣೀ ದುರ್ಗಾವತಿಯು. ದಕ್ಷಿಣಭಾರತದಲ್ಲಿ 16ನೇ ಶತಮಾನದಲ್ಲಿ ಗಡಮಂಡಲವು ಸಣ್ಣ ರಾಜ್ಯವಾಗಿತ್ತು. ಆದರೆ ಅಪಾರ ವೈಭವದಿಂದಲೂ, ಸಂಪತ್ತಿನಿಂದಲೂ ಮೆರೆಯುತ್ತಿತ್ತು. ಎಲ್ಲ ರಾಜ್ಯಗಳಲ್ಲಿ ಮಹತ್ತರ ಖ್ಯಾತಿ ಪಡೆದಿತ್ತು. ದುರ್ಗಾವತಿಯು ಕೆಲಕಾಲ ಸುಖದಿಂದ ಕಳೆದಳು. ತರುವಾಯ ಅವಳಿಗೆ ವೈಧವ್ಯವು ಪ್ರಾಪ್ತವಾಯಿತು. ಆದರೆ ಅವಳು ಧೈರ್ಯಗುಂದಲಿಲ್ಲ. ಸಾಹಸದಿಂದ ತನ್ನ ಕರ್ತವ್ಯವನ್ನು ಮುಂದುವರಿಸಿದಳು. ತನ್ನ ಪ್ರಿಯ ಮಗನಾದ ನಾರಾಯಣನ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಳು. ಒಳ್ಳೆಯ ಕೌಶಲ್ಯದಿಂದಲೂ, ನೀತಿಯಿಂದಲೂ ರಾಜ್ಯಕಾರಭಾರವನ್ನು ಸಾಗಿಸಹತ್ತಿದಳು. 15 ವರ್ಷಗಳವರೆಗೆ ಸುವ್ಯವಸ್ಥಿತವಾಗಿ ರಾಜ್ಯಪಾಲನೆ ಮಾಡಿದಳು. ಗಡ ಮಂಡಲದ ಧ್ವಜವು ಆಕಾಶಕ್ಕೆ ಮುಟ್ಟಿತ್ತು. ಎಲ್ಲಿಯವರೆಗೆ ದುರ್ಗಾವತಿಯ ಭುಜಗಳಲ್ಲಿ ಶಕ್ತಿ ಇರುವದೋ ಅಲ್ಲಿಯವರೆಗೆ ಆ ಧ್ವಜವು ಯಾರ ಆಧೀನವಾಗುವಂತಿರಲಿಲ್ಲ. ರಾಣಿಯ ಸೈನ್ಯವು ಸುಸಂಘಟಿತವಾಗಿತ್ತು.

01. ರಾಣೀ ದುರ್ಗಾವತಿಯ ಮಗನ ಹೆಸರೇನು?

(1) ಮಹೋಬಾ (2) ನಾರಾಯಣ

(3) ಅಕಬರ (4) ಬಿರಬಲ

02. ರಾಣೀ ದುರ್ಗಾವತಿಯು .... ರಾಜ್ಯದ ರಾಜ್ಯ ಕಾರಬಾರವನ್ನು ಸುವ್ಯವಸ್ಥಿತವಾಗಿ ಸಾಗಿಸಿದಳು.

(1) ದಕ್ಷಿಣಭಾರತ (2) ಕಾಶಿ

(3) ಕೋಸಲ (4) ಗಡಮಂಡಲ

<u>ಕೇವಲ ಕಚ್ಚಾ ಕೆಲಸಕ್ಕಾಗಿ</u>

03. **ಕೆಳಗಿನವುಗಳಲ್ಲಿ ತಪ್ಪಾದ ವಾಕ್ಯ ಗುರುತಿಸಿರಿ.**

(1) ರಾಣೀ ದುರ್ಗಾವತಿಗೆ ವೈಧವ್ಯ ಪ್ರಾಪ್ತವಾಯಿತು.

(2) ಗಡಮಂಡಲ ರಾಜ್ಯವು ಎಲ್ಲೆಡೆ ಖ್ಯಾತಿ ಪಡೆದಿತ್ತು.

(3) ದುರ್ಗಾವತಿಯು ಜೀವನವಿಡಿ ಸುಖ ಸಂತೋಷದಿಂದ ಬಾಳಿದಳು.

(4) ದುರ್ಗಾವತಿಯು ತನ್ನ ಮಗನ ಪಾಲನ ಪೋಷಣೆಯ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಳು.

ಪ್ರಶ್ನೆ ಕ್ರಮಾಂಕ 04 ರಿಂದ 06ರ ಸಲುವಾಗಿ ಸೂಚನೆ:

ಕೆಳಗಿನ ಕವಿತೆಯನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಯೋಗ್ಯ ಉತ್ತರಗಳನ್ನು ಪರ್ಯಾಯಗಳಿಂದ ಆರಿಸಿರಿ.

ಅನ್ನದಾನ ಹೊನ್ನದಾನ
ಮತ್ತೆ ವಸ್ತ್ರದಾನವು
ಎಲ್ಲ ದಾನಕ್ಕಿಂತ ಮಿಗಿಲು
ನಮ್ಮ ನೇತ್ರ ದಾನವು
ಸತ್ತ ಮೇಲೆ ದೇಹದಲ್ಲಿ
ನೇತ್ರವಿದ್ದರೇನದು ?
ಸಾವ ಮುನ್ನ ನೇತ್ರವನ್ನು
ದಾನ ಮಾಡಿ ಲೇಸದು
ನೇತ್ರ ವಿಲ್ಲದವರಿಗೆ
ಅದನು ಕಸಿ ಮಾಡುವರು
ಅಂಧರಿಗೆ ಕಣ್ಣು ಕೊಟ್ಟ
ಪುಣ್ಯ ನಮಗೆ ಬರುವದು
ದೇಹವಳಿದು ನೇತ್ರ ಉಳಿದು
ಜಗವನೆಲ್ಲ ನೋಳ್ಪವು
ಅಂಧಕಾರದಲ್ಲಿದ್ದ ಮನುಜಗೆ
ಬೆಳಕು ನೀಡಿದ ಭಾಗ್ಯವು

ಕೇವಲ ಕಚ್ಚಾ ಕೆಲಸಕ್ಕಾಗಿ

04. ಕವಿತೆಯಲ್ಲಿ ಎಷ್ಟು ಪ್ರಕಾರದ ದಾನಗಳ ಬಗ್ಗೆ ಹೇಳಲಾಗಿದೆ?

(1) ಮೂರು (2) ನಾಲ್ಕು

(3) ಒಂದು (4) ಎರಡು

05. ಎಲ್ಲ ದಾನಗಳಿಗಿಂತಲೂ ಶ್ರೇಷ್ಠ ದಾನ ಎಂದು ಯಾವುದಕ್ಕೆ ಹೇಳಲಾಗಿದೆ?

(1) ಅನ್ನದಾನ (2) ಹೊನ್ನದಾನ

(3) ನೇತ್ರದಾನ (4) ವಸ್ತ್ರದಾನ

06. 'ಕತ್ತಲೆ' ಈ ಶಬ್ದದ ಅರ್ಥ ಕೊಡುವ ಯಾವ ಪದವನ್ನು ಕವಿತೆಯಲ್ಲಿ ಬಳಸಲಾಗಿದೆ?

(1) ಅಂಧ (2) ನೇತ್ರ

(3) ಪುಣ್ಯ (4) ಅಂಧಕಾರ

07. ಕೆಳಗಿನ ಪರ್ಯಾಯಗಳಲ್ಲಿ ನಾಮಪದ ಯಾವುದೆಂಬುದು ಗುರುತಿಸಿರಿ.

(1) ತಾನು (2) ದೇಶ

(3) ತನಗೆ (4) ಅವಳು

08. ಕೆಳಗಿನವುಗಳಲ್ಲಿ ನಪುಂಸಕಲಿಂಗದ ಉದಾಹರಣೆ ಯಾವುದು?

(1) ತರುಣ (2) ಆಕಳು

(3) ಮಕ್ಕಳು (4) ಅಣ್ಣ

09. ಕೆಳಗಿನವುಗಳಲ್ಲಿ ತಪ್ಪಾದ ಜೋಡಿಯನ್ನು ಗುರುತಿಸಿರಿ.

(1) ಶಿಕ್ಷಕ – ಶಿಕ್ಷಕರು (2) ಗುರು – ಗುರುಗಳು

(3) ತಂಗಿ – ತಂಗಿಯರು (4) ಅಕ್ಕ – ಅಕ್ಕರು

10. ಕೆಳಗಿನವುಗಳಲ್ಲಿ ವರ್ತಮಾನ ಕಾಲದ ವಾಕ್ಯ ಯಾವುದು?

(1) ಅನೇಕ ವಿಶ್ವ ವಿಖ್ಯಾತರು ಜೋಗ ಜಲಪಾತವನ್ನು ನೋಡಿ ಹೋಗಿದ್ದಾರೆ.

(2) ಬಡವರ ಮನೆಗೆ ಭಾಗ್ಯಲಕ್ಷ್ಮೀ ಬಂದಂತಾಯಿತು.

(3) ಹಂಪೆಯು ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳವಾಗಿ ಇಂದಿಗೂ ಗರ್ವದಿಂದ ತಲೆ ಎತ್ತಿ ನಿಂತಿದೆ.

(4) ಕಾರಂತರು ಕಾಲೇಜಿಗೆ ಶರಣು ಹೊಡೆದು ಅಸಹಕಾರ ಚಳುವಳಿಗೆ ಧುಮುಕಿದರು.

<u>ಕೇವಲ ಕಚ್ಚಾ ಕೆಲಸಕ್ಕಾಗಿ</u>

11. ಕೆಳಗಿನವುಗಳಲ್ಲಿ ಶುದ್ಧ ಶಬ್ದ ಯಾವುದು ಗುರುತಿಸಿರಿ.

(1) ಪದ್ಮಬೂಷಣ (2) ಪದ್ಮಬೂಶಣ

(3) ಪದ್ಮಭೂಷಣ (4) ಪದ್ಮಭೂಶಣ

12. 'ಕಣ್ಣು ತೆರೆ' ಈ ಪಡೆನುಡಿಯ ಅರ್ಥವನ್ನು ಪರ್ಯಾಯದಿಂದ ಗುರುತಿಸಿರಿ.

(1) ಓಡಿಹೋಗು (2) ಎಚ್ಚರಗೊಳ್ಳು

(3) ತೋಚದಂತಾಗು (4) ಉಪಾಯ ಮಾಡು

13. ಕೆಳಗಿನ ಗಾದೆ ಮಾತು ಪೂರ್ಣಗೊಳಿಸಿರಿ.

ನಾಲಿಗೆ ಒಳ್ಳೆಯದಾದರೆ ....

(1) ಮಾತು ಒಳ್ಳೆಯದು (2) ಊರೆಲ್ಲ ಒಳ್ಳೆಯದು

(3) ಎಲ್ಲವೂ ಒಳ್ಳೆಯದು (4) ನಾಡೆಲ್ಲ ಒಳ್ಳೆಯದು

ಪ್ರಶ್ನೆ ಕ್ರಮಾಂಕ 14 ರಿಂದ 16ರ ವರೆಗೆ ಸೂಚನೆ:

ಕೆಳಗೆ ಕೊಟ್ಟ ಸಂವಾದವನ್ನು ಓದಿರಿ. ಅದರ ಕೆಳಗೆ ಕೊಟ್ಟ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯಗಳಿಂದ ಆರಿಸಿರಿ.

ನಮಸ್ಕಾರ ಗುರುಗಳೇ,

ಮಕ್ಕಳೇ, ಧ್ವಜಾರೋಹಣದ ವೇಳೆಯಾಯಿತು. ಆಕಾಶ ನಿನಗೆ ಮುಖ್ಯಾಧ್ಯಾಪಕರು ಭಾಷಣ ಮಾಡಲು ಹೇಳಿದ್ದಾರಲ್ಲವೆ?

ಹೌದು ಗುರುಗಳೇ, ಸ್ವಾತಂತ್ರ್ಯದಿನದ ಬಗ್ಗೆ ಭಾಷಣ ಮಾಡಲು ನನಗೆ ಅಭಿಮಾನವೆನಿಸುತ್ತದೆ.

ಮೇಘಾ, ನೀನು ಆಭಾರ ಪ್ರದರ್ಶನ ಮಾಡಬೇಕು ತಯಾರಿ ಮಾಡಿರುವಿಯಲ್ಲವೇ?

ಹೌದು ಗುರುಗಳೇ, ನಾನು ಎಲ್ಲವನ್ನೂ ಬರೆದು ಇಟ್ಟು ಕೊಂಡಿದ್ದೇನೆ.

ಲಕ್ಷ್ಮೀ, ಧ್ವಜಸ್ತಂಭದ ಸುತ್ತಲೂ ಹೂವಿನ ರಂಗೋಲಿಯನ್ನು ತುಂಬಾ ಸುಂದರವಾಗಿ ತೆಗೆದಿದ್ದೀಯಾ.

ಧನ್ಯವಾದಗಳು ಗುರುಗಳೇ,

ರಾಜು, ಅನಿತಾ, ಸಿಮ್ರನ್ ನೀವು ಧ್ವಜಗೀತೆಯನ್ನು ಹೇಳಬೇಕು.

ನಡೆಯಿರಿ ಹೊರಗಡೆ ಹೋಗೋಣ. ಧ್ವಜಾರೋಹಣಕ್ಕೆ ಕೆಲವೇ ನಿಮಿಷ ಉಳಿದಿದೆ.

ಆಯಿತು. ಗುರುಗಳೇ.

ಕೇವಲ ಕಚ್ಚಾ ಕೆಲಸಕ್ಕಾಗಿ

14. ಮೇಲಿನ ಸಂವಾದವು ಯಾವ ದಿನದಂದು ನಡೆದಿದೆ?

(1) 15 ಜನೇವರಿ (2) 26 ಜನೇವರಿ

(3) 01 ಮೇ (4) 15 ಅಗಷ್ಟ

15. ಮೇಲಿನ ಸಂವಾದವು ಎಲ್ಲಿ ನಡೆದಿದೆ?

(1) ಮೈದಾನದಲ್ಲಿ (2) ವರ್ಗದಲ್ಲಿ

(3) ಮನೆಯಲ್ಲಿ (4) ಹೇಳಲು ಬರುವುದಿಲ್ಲ

16. ಹೂವಿನ ರಂಗೋಲಿಯನ್ನು ಯಾರು ತೆಗೆದಿದ್ದಾರೆ?

(1) ಸಿಮ್ರನ್ (2) ರಾಜು

(3) ಲಕ್ಷ್ಮೀ (4) ಆಕಾಶ

17. ಕೆಳಗಿನವುಗಳಲ್ಲಿ ತಪ್ಪಾದ ಜೋಡಿ ಇರುವ ಪರ್ಯಾಯ ಯಾವುದು?

(1) ಮೊಬಾಯಿಲ್ - ಭ್ರಮಣಧ್ವನಿ (2) ಕಂಪ್ಯೂಟರ್ - ಸಂಗಣಕ

(3) ಪ್ರಿಂಟರ್ - ಮುದ್ರಣಯಂತ್ರ (4) ಇಂಟರ್‌ನೆಟ್ - ತಂತ್ರಜ್ಞಾನ

18. ಆರೋಗ್ಯಭಾಗ್ಯ ಪಡೆದಿರುವ ಜನರೇ ರಾಷ್ಟ್ರದ ಅಮೂಲ್ಯ ಸಂಪತ್ತು.
ಗೆರೆಹೊಡೆದ ಪದದ ಅರ್ಥ ಕೊಡುವ ಪರ್ಯಾಯ ಯಾವುದು?

(1) ಮೂಲ್ಯಹೀನ (2) ಬೆಲೆ ಇಲ್ಲದ

(3) ಬೆಲೆಯುಳ್ಳ (4) ಕನಿಷ್ಠ

19. 'ಕೀರ್ತಿವಂತ' ಶಬ್ದದ ವಿರುದ್ಧಾರ್ಥಕ ಶಬ್ದ ಯಾವುದು?

(1) ಕೀರ್ತಿಹೀನ (2) ಅಪಕೀರ್ತಿ

(3) ಕೀರ್ತಿ (4) ಕೀರ್ತಿಯುಳ್ಳವ

ಕೇವಲ ಕಚ್ಚಾ ಕೆಲಸಕ್ಕಾಗಿ

20. ಕೆಳಗಿನ ಪದಬಂಧದ ಬಿಟ್ಟ ಸ್ಥಳದಲ್ಲಿ ಬರುವ ಯೋಗ್ಯ ಅಕ್ಷರವನ್ನು ಪರ್ಯಾಯದಿಂದ ಆರಿಸಿರಿ.

		ಜಂ		
		ತು		
ಜ	ನ		ಯ	ಕ
		ಶ		
		ಕ		

(1) ನಾ (2) ಕಾ
(3) ಜಾ (4) ಮಾ

21. ಕೆಳಗಿನವುಗಳಲ್ಲಿ ಸರಿಯಾದ ಜೋಡಿ ಶಬ್ದ ಯಾವುದು?
(1) ಕರ - ಕುಶಲ (2) ದವಸ - ಧಾನ್ಯ
(3) ಜನ - ಸಂಪರ್ಕ (4) ಹೀನ - ವಿಚಾರ

22. ಡಾ. ರಾಜಕುಮಾರ ಅವರು ಕನ್ನಡ ಚಿತ್ರರಂಗದ ಧ್ರುವತಾರೆ ಎಂದೇ ಹೆಸರಾದವರು. ಈ ವಾಕ್ಯದಲ್ಲಿಯ ಅಲಂಕಾರಿಕ ಶಬ್ದ ಯಾವುದು?
(1) ಕನ್ನಡ (2) ಚಿತ್ರರಂಗ
(3) ಹೆಸರಾದವರು (4) ಧ್ರುವತಾರೆ

23. ರಸಭರಿತ ದ್ರಾಕ್ಷೆಯ ಗೊಂಚಲು ನೋಡಿ ನರಿಯ ಬಾಯಲ್ಲಿ ನೀರೂರಿತು.
ಈ ವಾಕ್ಯದಲ್ಲಿ ಸಮೂಹದರ್ಶಕ ಶಬ್ದ ಯಾವುದು?
(1) ಗೊಂಚಲು (2) ದ್ರಾಕ್ಷೆ
(3) ರಸಭರಿತ (4) ನರಿ

24. ಲ, ವಾ, ಯ, ನಾ, ಚ ಈ ಅಕ್ಷರಗಳನ್ನು ಒಂದೊಂದೇ ಸಲ ಉಪಯೋಗಿಸಿ ತಯಾರಿಸಿದ ಅರ್ಥಪೂರ್ಣ ಶಬ್ದದ ಕೊನೆಯ ಅಕ್ಷರ ಯಾವುದು?
(1) ಚ (2) ಲ
(3) ವಾ (4) ಯ

25. ವಿರಾಟ ಕೊಹಲಿ ಅವರು ಯಾವ ಆಟಕ್ಕೆ ಸಂಬಂಧಿಸಿದವರು?
(1) ಫುಟಬಾಲ್ (2) ಕ್ರಿಕೇಟ್
(3) ಹಾಕಿ (4) ಕುಸ್ತಿ

ಕೇವಲ ಕಚ್ಚಾ ಕೆಲಸಕ್ಕಾಗಿ

SECTION - II

MATHEMATICS

26. Nikhil purchased three chocobars from a shop. He paid ₹ 50 to the shopkeeper and got ₹ 5 back from him. What is the cost of each chocobar?

(1) ₹ 20 (2) ₹ 10

(3) ₹ 12 (4) ₹ 15

27. Jay purchased an old bike at ₹ 17000 and after 2 months he sold it at ₹ 15000. How much is the loss in this transaction?

(1) ₹ 2000 (2) ₹ 4000

(3) ₹ 3200 (4) ₹ 5000

28. From the given set how many numbers are not completely divisible by 2?

162, 131, 890, 772, 245

(1) Three (2) Four

(3) Two (4) One

29. Which number should be subtracted from quarter to twenty six thousand to obtain 4 digit smallest even number?

(1) 25750 (2) 24750

(3) 27450 (4) 26750

30. If in the year 2010 Republic Day occured on Tuesday then in the same year Teacher's Day occured on which day?

(1) Sunday (2) Saturday

(3) Monday (4) Friday

SPACE FOR ROUGH WORK

ವಿಭಾಗ - II

ಗಣಿತ

26. ನಿಖಿಲನು ಮೂರು ಚೊಕೊಬಾರನ್ನು ಕೊಂಡನು. ಅಂಗಡಿಕಾರನಿಗೆ 50 ರೂಪಾಯಿಯ ನೋಟನ್ನು ಕೊಟ್ಟಾಗ ಅವನಿಗೆ ಅಂಗಡಿಕಾರನು ಐದು ರೂಪಾಯಿಗಳನ್ನು ಮರಳಿ ಕೊಟ್ಟನು. ಹಾಗಾದರೆ ಪ್ರತಿಯೊಂದು ಚೊಕೊಬಾರದ ಬೆಲೆ ಎಷ್ಟು?

(1) 20 ರೂಪಾಯಿಗಳು (2) 10 ರೂಪಾಯಿಗಳು
(3) 12 ರೂಪಾಯಿಗಳು (4) 15 ರೂಪಾಯಿಗಳು

27. ಜಯನು ಹಳೆಯ ಮೋಟಾರಸಾಯಕಲವನ್ನು 17000 ರೂಪಾಯಿಗಳಿಗೆ ಕೊಂಡು ಎರಡು ತಿಂಗಳನಂತರ 15000 ರೂಪಾಯಿಗಳಿಗೆ ಮಾರಿದನು. ಹಾಗಾದರೆ ಅವನಿಗೆ ಈ ವ್ಯವಹಾರದಲ್ಲಿ ಎಷ್ಟು ರೂಪಾಯಿಗಳ ಹಾನಿಯಾಯಿತು?

(1) 2000 ರೂಪಾಯಿಗಳು (2) 4000 ರೂಪಾಯಿಗಳು
(3) 3200 ರೂಪಾಯಿಗಳು (4) 5000 ರೂಪಾಯಿಗಳು

28. 162, 131, 890, 772, 245 ಈ ಸಂಖ್ಯೆಗಳಲ್ಲಿಯ ಎಷ್ಟು ಸಂಖ್ಯೆಗಳಿಗೆ 2ರಿಂದ ನಿಶೇಷ ಭಾಗಹೋಗುವುದಿಲ್ಲ?

(1) ಮೂರು (2) ನಾಲ್ಕು
(3) ಎರಡು (4) ಒಂದು

29. 'ಇಪ್ಪತ್ತೈದು ಮುಕ್ಕಾಲು ಸಾವಿರ' ಈ ಸಂಖ್ಯೆಯಿಂದ ಯಾವ ಸಂಖ್ಯೆಯನ್ನು ವಜಾ ಮಾಡಿದಾಗ ಎಲ್ಲಕ್ಕೂ ಚಿಕ್ಕ ನಾಲ್ಕಂಕಿಯ ಸಮಸಂಖ್ಯೆಯು ದೊರೆಯುವುದು?

(1) 25750 (2) 24750
(3) 27450 (4) 26750

30. ಸನ್ 2010ರಲ್ಲಿ ಪ್ರಜಾಸತ್ತಾತ್ಮಕ ದಿನವು ಮಂಗಳವಾರವಿದ್ದರೆ ಅದೇ ವರ್ಷದಲ್ಲಿ ಶಿಕ್ಷಕರ ದಿನಾಚರಣೆಯು ಯಾವ ದಿನದಂದು ಬರುತ್ತದೆ?

(1) ರವಿವಾರ (2) ಶನಿವಾರ
(3) ಸೋಮವಾರ (4) ಶುಕ್ರವಾರ

ಕೇವಲ ಕಚ್ಚಾ ಕೆಲಸಕ್ಕಾಗಿ

31. Sanjeev deposited certain amount at the rate 5 p.c.p.a. for 3 years in a bank. He received simple interest of ₹ 1500 after 3 years. How much amount did he deposit in the bank?

(1) ₹ 11500 (2) ₹ 10000

(3) ₹ 4500 (4) ₹ 5000

32. Which of the following numbers do not occur at unit place in the prime numbers from 10 to 100?

(1) 1, 3, 7 (2) 9, 7, 3

(3) 5, 2, 4 (4) 1, 3, 9

33. Each angle of a rectangle is _____.

(1) Acute angle (2) Right angle

(3) Obtuse angle (4) Linear angle

34. Quarter to nine litre means how much millilitre?

(1) 8750 ml (2) 9750 ml

(3) 8250 ml (4) 8550 ml

35. Select the correct option to indicate the number 'Seven lakhs seven thousand seven hundred and seven' in figures.

(1) 770707 (2) 77777

(3) 707707 (4) 707070

SPACE FOR ROUGH WORK

31. ಸಂಜೀವನು ಕೆಲವು ಹಣವನ್ನು ಪ್ರ. ಪ. ಪ್ರ. ಶೇ. 5 ದರದಿಂದ 3 ವರ್ಷ ಬ್ಯಾಂಕಿನಲ್ಲಿ ಇಟ್ಟನು. ಮೂರು ವರ್ಷಗಳ ನಂತರ ಅವನಿಗೆ 1500 ರೂಪಾಯಿಗಳು ಸರಳಬಡ್ಡಿ ದೊರೆಯಿತು ಹಾಗಾದರೆ ಅವನು ಎಷ್ಟು ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದನು?

(1) 11500 ರೂಪಾಯಿಗಳು (2) 10000 ರೂಪಾಯಿಗಳು

(3) 4500 ರೂಪಾಯಿಗಳು (4) 5000 ರೂಪಾಯಿಗಳು

32. 10 ರಿಂದ 100 ಈ ಸಂಖ್ಯೆಗಳಲ್ಲಿ ಬರುವ ಮೂಲಸಂಖ್ಯೆಗಳ ಎಕಕ (ಬಿಡಿಗಾಳು)ಸ್ಥಾನದಲ್ಲಿ ಕೆಳಗಿನವುಗಳಲ್ಲಿಯ ಯಾವ ಅಂಕಿಯು ಇರುವುದಿಲ್ಲ?

(1) 1,3,7 (2) 9,7,3

(3) 5,2,4 (4) 1,3,9

33. ಆಯತದ ಪ್ರತಿಯೊಂದು ಕೋನವು __________ ಇರುತ್ತದೆ.

(1) ಲಘುಕೋನ (2) ಕಾಟಕೋನ

(3) ವಿಶಾಲಕೋನ (4) ಪ್ರವಿಶಾಲಕೋನ

34. ಎಂಟು ಮುಕ್ಕಾಲು ಲೀಟರ ಎಂದರೆ ಎಷ್ಟು ಮಿಲಿಲೀಟರ್?

(1) 8750 ಮಿ.ಲೀ. (2) 9750 ಮಿ.ಲೀ.

(3) 8250 ಮಿ.ಲೀ. (4) 8550 ಮಿ.ಲೀ.

35. 'ಏಳು ಲಕ್ಷ ಏಳು ಸಾವಿರದಾ ಏಳನೂರಾ ಏಳು' ಈ ಸಂಖ್ಯೆಯನ್ನು ಅಂಕಿಗಳಲ್ಲಿ ಹೇಗೆ ಬರೆಯುತ್ತಾರೆ?

(1) 770707 (2) 77777

(3) 707707 (4) 707070

ಕೇವಲ ಕಚ್ಚಾ ಕೆಲಸಕ್ಕಾಗಿ

36. Identify the pattern and select the correct number to fill the blank box.

5	7	10		22	33	46

(1) 5 (2) 17

(3) 10 (4) 15

37. Select the correct option which indicates the ascending order of fractions.

(1) $\frac{5}{6}, \frac{4}{6}, \frac{1}{6}, \frac{11}{6}, \frac{17}{6}$ (2) $\frac{1}{6}, \frac{5}{6}, \frac{6}{6}, \frac{11}{6}, \frac{17}{6}$

(3) $\frac{5}{6}, \frac{1}{6}, \frac{6}{6}, \frac{17}{6}, \frac{11}{6}$ (4) $\frac{1}{6}, \frac{5}{6}, \frac{6}{6}, \frac{17}{6}, \frac{11}{6}$

38. $225 \times 72 = \boxed{}$ select the correct option.

(1) 16200 (2) 2250

(3) 1650 (4) 22500

39. When two cubes are joined to form a cuboid then the number of edges are more than number of surfaces by how much?

(1) More by 2 (2) More by 3

(3) More by 8 (4) More by 6

40. Select the correct option to replace the box. $\frac{4}{7} + \frac{\boxed{}}{8} = \frac{53}{56}$

(1) 4 (2) 2

(3) 3 (4) 5

SPACE FOR ROUGH WORK

36. ಕೊಟ್ಟ ಆಕೃತಿಬಂಧವನ್ನು ಲಕ್ಷ್ಯದಲ್ಲಿಟ್ಟುಕೊಂಡು ರಿಕ್ತ (ಬಿಟ್ಟಿರುವ) ಚೌಕಟ್ಟಿನಲ್ಲಿ ಬರುವ ಸಂಖ್ಯೆಯನ್ನು ಬರೆಯಿರಿ.

5	7	10		22	33	46

(1) 5 (2) 17

(3) 10 (4) 15

37. ಕೆಳಗಿನ ಪರ್ಯಾಯಗಳಲ್ಲಿಯ ಅಪೂರ್ಣಾಂಕಗಳನ್ನು ಏರಿಕೆ ಕ್ರಮದಲ್ಲಿ ಮಂಡಿಸಿರುವ ಯೋಗ್ಯವಿರುವ ಪರ್ಯಾಯ ಯಾವುದು?

1) $\frac{5}{6}, \frac{4}{6}, \frac{1}{6}, \frac{11}{6}, \frac{17}{6}$ (2) $\frac{1}{6}, \frac{5}{6}, \frac{6}{6}, \frac{11}{6}, \frac{17}{6}$

(3) $\frac{5}{6}, \frac{1}{6}, \frac{6}{6}, \frac{17}{6}, \frac{11}{6}$ (4) $\frac{1}{6}, \frac{5}{6}, \frac{6}{6}, \frac{17}{6}, \frac{11}{6}$

38. $225 \times 72 = \boxed{}$ ಚೌಕಟ್ಟಿನಲ್ಲಿ ಯೋಗ್ಯ ಪರ್ಯಾಯ ಆಯ್ಕೆ ಮಾಡಿರಿ.

(1) 16200 (2) 2250

(3) 1650 (4) 22500

39. ಎರಡು ಘನಾಕೃತಿಗಳನ್ನು ಒಂದನ್ನೊಂದು ಜೋಡಿಸಿದಾಗ ತಯಾರಾಗುವ ತ್ರಿಮಿತಿಯ ಆಕೃತಿಯ ಅಂಚುಗಳ ಸಂಖ್ಯೆಯು ಪೃಷ್ಠಗಳ ಸಂಖ್ಯೆಗಿಂತ ಎಷ್ಟರಿಂದ ಹೆಚ್ಚಿಗೆ ಇರುವುದು?

(1) 2 ರಿಂದ ಹೆಚ್ಚು (2) 3 ರಿಂದ ಹೆಚ್ಚು

(3) 8 ರಿಂದ ಹೆಚ್ಚು (4) 6 ರಿಂದ ಹೆಚ್ಚು

40. $\frac{4}{7} + \frac{\boxed{}}{8} = \frac{53}{56}$ ಚೌಕಟ್ಟಿನಲ್ಲಿ ಬರುವ ಸಂಖ್ಯೆಯನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

(1) 4 (2) 2

(3) 3 (4) 5

<u>ಕೇವಲ ಕಚ್ಚಾ ಕೆಲಸಕ್ಕಾಗಿ</u>

41. 30% of 60 = ?

(1) 9 (2) 90

(3) 30 (4) 18

42. Last year 427523 students of std. 5^{th} and 238249 of std. 8^{th} appeared for scholarship examination. Total how many students appeared for the examination.

(1) 662757 (2) 665772

(3) 662752 (4) 667527

43. Solve

$$\left(5+\frac{2}{10}+\frac{4}{100}+\frac{5}{1000}\right) - \left(2+\frac{1}{10}+\frac{3}{100}+\frac{2}{1000}\right) = \boxed{}$$

(1) 3.003 (2) 3.005

(3) 3.113 (4) 3.004

44. Riya purchased two and quarter metre of white cloth and two and three quarter metre of blue cloth to stitch a uniform. Total how much cloth did she purchase?

(1) 5 metre (2) 4.15 metre

(3) 4.95 metre (4) 5.10 metre

45. 3000 is divided by which number to get the quotient as 85 and remainder as 25?

(1) 45 (2) 25

(3) 55 (4) 35

SPACE FOR ROUGH WORK

41. 60 ರ 30% = ಎಷ್ಟು?

(1) 9 (2) 90

(3) 30 (4) 18

42. ಕಳೆದ ವರ್ಷ ಶಿಷ್ಯವೃತ್ತಿ ಪರೀಕ್ಷೆಯಲ್ಲಿ ಐದನೆಯ ಇಯತ್ತೆಯ 427523 ವಿದ್ಯಾರ್ಥಿಗಳು ಹಾಗೂ ಎಂಟನೆಯ ಇಯತ್ತೆಯ 238249 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. ಹಾಗಾದರೆ ಒಟ್ಟು ಎಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು?

(1) 662757 (2) 665772

(3) 662752 (4) 667527

43. ಚೌಕಟ್ಟಿನಲ್ಲಿ ಯೋಗ್ಯ ಸಂಖ್ಯೆಯನ್ನು ಬರೆಯಿರಿ.

$$\left(5+\frac{2}{10}+\frac{4}{100}+\frac{5}{1000}\right) - \left(2+\frac{1}{10}+\frac{3}{100}+\frac{2}{1000}\right) = \boxed{}$$

(1) 3.003 (2) 3.005

(3) 3.113 (4) 3.004

44. ರಿಯಾಳು ಸಮವಸ್ತ್ರವನ್ನು ಹೊಲಿಸುವುದಕ್ಕಾಗಿ ಎರಡು ಕಾಲು ಮೀಟರ್ ಬಿಳಿಬಣ್ಣದ ಹಾಗೂ ಎರಡು ಮುಕ್ಕಾಲು ಮೀಟರ್ ನೀಲಿ ಬಣ್ಣದ ಬಟ್ಟೆಯನ್ನು ಕೊಂಡಳು. ಹಾಗಾದರೆ ಅವಳು ಒಟ್ಟು ಎಷ್ಟು ಮೀಟರ್ ಬಟ್ಟೆಯನ್ನು ಕೊಂಡಳು?

(1) 5 ಮೀಟರ್ (2) 4.15 ಮೀಟರ್

(3) 4.95 ಮೀಟರ್ (4) 5.10 ಮೀಟರ್

45. 3000 ಈ ಸಂಖ್ಯೆಗೆ ಎಷ್ಟರಿಂದ ಭಾಗಿಸಿದಾಗ ಭಾಗಾಕಾರವು ಎಂಬತ್ತೈದು ಹಾಗೂ ಶೇಷವು ಇಪ್ಪತ್ತೈದು ಉಳಿಯುವುದು?

(1) 45 (2) 25

(3) 55 (4) 35

ಕೇವಲ ಕಚ್ಚಾ ಕೆಲಸಕ್ಕಾಗಿ

46. Suhas participated in a motorbike ride competition of 60 km. He covered the distance with the speed 15 km/hr. If he started at 10:15 am. then at what time will he reach the destination.

(1) 14:15 (2) 12:15

(3) 14:30 (4) 13:00

47. Solve

$70602 + \boxed{} = 92328$

(1) 22823 (2) 21726

(3) 21720 (4) 27612

48. 12 dozen notebooks are packed in one bundle. If the thickness of each notebook is 5 mm then what is the height of the bundle in cm?

(1) 72 cm (2) 720 mm

(3) 720 deci metre (4) 720 m

49. Convert the improper fraction $\frac{47}{3}$ into mixed fraction.

(1) $15\ \frac{4}{3}$ (2) $3\ \frac{2}{15}$

(3) $15\ \frac{3}{2}$ (4) $15\ \frac{2}{3}$

SPACE FOR ROUGH WORK

46. ಸುಹಾಸನು 60ಕಿಮೀ. ಅಂತರವನ್ನು ಕ್ರಮಿಸುವ ಮೋಟರಸಾಯಕಲದ ಸ್ಪರ್ಧೆಯಲ್ಲಿ ಭಾಗವಹಿಸಿದನು. ಅವನು ಈ ಅಂತರವನ್ನು 15 ಕಿಮೀ. ಪ್ರತಿ ತಾಸಿಗೆ ಈ ವೇಗದಿಂದ ಪೂರ್ಣಮಾಡಿದನು ಅವನು ಈ ಸ್ಪರ್ಧೆಯನ್ನು 10.15ಕ್ಕೆ ಆರಂಭಿಸಿದರೆ ನಿಗದಿಪಡಿಸಿರುವ ಸ್ಥಾನಕ್ಕೆ ಅವನು ಎಷ್ಟು ಗಂಟೆಗೆ ತಲುಪಿರಬಹುದು?

(1) 14.15 ಗಂಟೆಗೆ (2) 12.15 ಗಂಟೆಗೆ

(3) 14.30 ಗಂಟೆಗೆ (4) 13.00 ಗಂಟೆಗೆ

47. 70602 + $\boxed{}$ = 92328 ಇದ್ದರೆ ಚೌಕಟ್ಟಿನಲ್ಲಿ ಯಾವ ಸಂಖ್ಯೆ ಬರುವುದು?

(1) 22823 (2) 21726

(3) 21720 (4) 27612

48. 12 ಡಜನ್ ವಹಿಗಳ ಒಂದು ಕಟ್ಟು (ಗತ್ತಾ) ಇಡಲಾಯಿತು. ಒಂದು ವಹಿಯು 5ಮಿಮೀ ದಪ್ಪವಿದ್ದರೆ ವಹಿಗಳ ಕಟ್ಟಿನ (ಗತ್ತಾದ) ಎತ್ತರ ಎಷ್ಟು ಸೆಮೀ ಇರುವುದು?

(1) 72 ಸೆಮೀ (2) 720 ಮಿಮೀ

(3) 720 ಡೆಸಿಮೀ (4) 720 ಮೀ

49. $\frac{47}{3}$ ಈ ಅಪೂರ್ಣಾಂಕವನ್ನು ಪೂರ್ಣಾಂಕಯುಕ್ತ ಅಪೂರ್ಣಾಂಕದಲ್ಲಿ ರೂಪಾಂತರಿಸಿರಿ.

(1) $15\frac{4}{3}$ (2) $3\frac{2}{15}$

(3) $15\frac{3}{2}$ (4) $15\frac{2}{3}$

ಕೇವಲ ಕಚ್ಚಾ ಕೆಲಸಕ್ಕಾಗಿ

50. In the given figure how many vertices are there?



(1) 8 (2) 9

(3) 10 (4) 7

51. 65 kg 500 gm of sweets were brought by an Institute for school students. If 60 kg 200 gm of sweets were distributed among the students how much sweets are left?

(1) 5 kg 200 gm (2) 5 kg 100 gm

(3) 5 kg 400 gm (4) 5 kg 300 gm

52. In a circle, radius is 2 cm and length of a chord is 3 cm. What is the length of longest chord of a circle?

(1) 5 cm (2) 6 cm

(3) 2 cm (4) 4 cm

SPACE FOR ROUGH WORK

50. ಕೊಟ್ಟ ಆಕೃತಿಗೆ ಎಷ್ಟು ಶಿರೋಬಿಂದುಗಳಿವೆ?



(1) 8 (2) 9

(3) 10 (4) 7

51. ಒಂದು ಸಂಸ್ಥೆಯವರು ಶಾಲೆಯಲ್ಲಿಯ ಮಕ್ಕಳಿಗೆ ಕೊಡುವುದಕ್ಕಾಗಿ 65ಕಿ.ಗ್ರಾ್ಯಂ 500ಗ್ರಾ್ಯಂ ಸಿಹಿತಿಂಡಿಯನ್ನು ತಂದರು. 60 ಕಿ.ಗ್ರಾ್ಯಂ 200ಗ್ರಾ್ಯಂ ಸಿಹಿತಿಂಡಿಯ ವಿತರಣೆ ಮಾಡಲಾಯಿತು. ಹಾಗಾದರೆ ಎಷ್ಟು ಸಿಹಿತಿಂಡಿ ಉಳಿಯಿತು?

(1) 5ಕಿ.ಗ್ರಾ್ಯಂ. 200ಗ್ರಾ್ಯಂ (2) 5ಕಿ.ಗ್ರಾ್ಯಂ. 100ಗ್ರಾ್ಯಂ

(3) 5ಕಿ.ಗ್ರಾ್ಯಂ. 400ಗ್ರಾ್ಯಂ (4) 5ಕಿ.ಗ್ರಾ್ಯಂ. 300ಗ್ರಾ್ಯಂ

52. ವರ್ತುಳದ ತ್ರಿಜ್ಯ 2ಸೆಮೀ ಇದೆ. ಒಂದು 'ಜ್ಯಾ' 3ಸೆಮೀ ಇದೆ. ಹಾಗಾದರೆ ಆ ವರ್ತುಳದ ಎಲ್ಲಕ್ಕೂ ದೊಡ್ಡ 'ಜ್ಯಾ'ವು ಎಷ್ಟು ಸೆಮೀ ಇದೆ?

(1) 5ಸೆಮೀ (2) 6ಸೆಮೀ

(3) 2ಸೆಮೀ (4) 4ಸೆಮೀ

ಕೇವಲ ಕಚ್ಚಾ ಕೆಲಸಕ್ಕಾಗಿ

53. Which of the following mathematical expression has maximum value?

(1) $10 - 3 \times 3$ (2) $10 \times 3 + 3$

(3) $10 + (3 + 3)$ (4) $3 \times 3 + 10$

54. A rectangular room of length 10m and breadth 8m is tiled. What is the cost of tilling at the rate of ₹ 30 per sqm?

(1) ₹ 2400 (2) ₹ 2200

(3) ₹ 2000 (4) ₹ 80

55. A decimal fraction 0.17 cannot be written in which of the following way.

(1) $\frac{17}{100}$ (2) $\frac{10}{100}+\frac{7}{100}$

(3) $\frac{10+7}{100}$ (4) $10+\frac{7}{100}$

56. Select the correct option

(1) Selling price – Cost price = Profit

(2) Cost price + Selling price = Loss

(3) Selling price – Loss = Cost price

(4) Cost price – Profit = Selling price

57. 3, 0, 5, 7, 9, 1 use each digit only once to obtain largest 6 digit odd number.

(1) 975310 (2) 105793

(3) 975301 (4) 973501

SPACE FOR ROUGH WORK

53. ಕೆಳಗಿನವುಗಳಲ್ಲಿಯ ಯಾವ ಪದಾವಲಿಯ ಬೆಲೆಯು ಎಲ್ಲಕ್ಕೂ ಹೆಚ್ಚು ಇದೆ?

(1) $10 - 3 \times 3$ (2) $10 \times 3 + 3$

(3) $10 + (3 + 3)$ (4) $3 \times 3 + 10$

54. ಒಂದು ಆಯತಾಕೃತಿ ವರ್ಗಕೋಣೆಯ ಉದ್ದ 10ಮೀ. ಹಾಗೂ ಅಗಲ 8ಮೀ ಇದೆ.

ಆ ವರ್ಗಕೋಣೆಯಲ್ಲಿ ಫರಸಿ ಕೂಡಿಸುವುದಕ್ಕಾಗಿ ಒಂದು ಚೌ.ಮೀಟರಗೆ 30 ರೂಪಾಯಿ ಈ ಪ್ರಮಾಣದಂತೆ ಎಷ್ಟು ಕೂಲಿ ಕೊಡಬೇಕಾಗುವುದು?

(1) 2400 ರೂಪಾಯಿಗಳು (2) 2200ರೂಪಾಯಿಗಳು

(3) 2000 ರೂಪಾಯಿಗಳು (4) 80 ರೂಪಾಯಿಗಳು

55. 0.17 ಈ ದಶಾಂಶ ಅಪೂರ್ಣಾಂಕವನ್ನು ಯಾವ ರೀತಿಯಾಗಿ ಬರೆಯಲು ಬರುವುದಿಲ್ಲ?

(1) $\frac{17}{100}$ (2) $\frac{10}{100}+\frac{7}{100}$

(3) $\frac{10+7}{100}$ (4) $10+\frac{7}{100}$

56. ಕೆಳಗಿನ ಪರ್ಯಾಯಗಳಲ್ಲಿಯ ಯೋಗ್ಯ ವಿಧಾನ ಯಾವುದು?

(1) ಮಾರಿದಬೆಲೆ – ಕೊಂಡಬೆಲೆ = ಲಾಭ (2) ಕೊಂಡಬೆಲೆ + ಮಾರಿದಬೆಲೆ = ಹಾನಿ

(3) ಮಾರಿದಬೆಲೆ – ಹಾನಿ = ಕೊಂಡಬೆಲೆ (4) ಕೊಂಡಬೆಲೆ – ಲಾಭ = ಮಾರಿದಬೆಲೆ.

57. 3,0,5,7,9,1 ಇವುಗಳಲ್ಲಿ ಪ್ರತಿಯೊಂದು ಅಂಕಿಯನ್ನು ಒಂದೇಸಲ ಉಪಯೋಗಿಸಿ ಆರು ಅಂಕಿಯ ಎಲ್ಲಕ್ಕೂ ದೊಡ್ಡ ವಿಷಮ ಸಂಖ್ಯೆಯನ್ನು ತಯಾರಿಸಿರಿ.

(1) 975310 (2) 105793

(3) 975301 (4) 973501

ಕೇವಲ ಕಚ್ಚಾ ಕೆಲಸಕ್ಕಾಗಿ

58. 6 hrs 40 min + 2 hrs 35 min = ?

(1) 8 hrs 40 min (2) 8 hrs 15 min

(3) 5 hrs 5 min (4) 9 hrs 15 min

59. What is the percentage of shaded portion in the given figure?



(1) 50% (2) 75%

(3) 25% (4) 85%

60. Chandu typed at the speed of N words per hour for 5 hours and Ali typed at the speed of M words per hour for 6 hours. Total how many words did both of them type?

(1) $5N \times 6M$ (2) $6M - 5N$

(3) $5M \times 6N$ (4) $5N + 6M$

61. In a milk collection centre there are 300 bags of 1 litre each and 600 bags of 500 ml each. If 560 litres of milk is distributed then how much milk is left?

(1) 40 litre (2) 50 litre

(3) 500 litre (4) 30 litre

SPACE FOR ROUGH WORK

58. 6 ತಾಸು 40 ನಿಮಿಷಗಳು + 2 ತಾಸು 35 ನಿಮಿಷಗಳು = ಎಷ್ಟು?

(1) 8 ತಾಸು 40 ನಿಮಿಷಗಳು (2) 8 ತಾಸು 15 ನಿಮಿಷಗಳು

(3) 5 ತಾಸು 5 ನಿಮಿಷಗಳು (4) 9 ತಾಸು 15 ನಿಮಿಷಗಳು

59. ಕೊಟ್ಟ ಆಕೃತಿಯಲ್ಲಿಯ ರೇಖಾಂಕಿತ ಭಾಗದ ಶೇಕಡಾಮಾನ ಎಷ್ಟು?



(1) 50% (2) 75%

(3) 25% (4) 85%

60. ಚಂದುನು ಒಂದು ತಾಸಿಗೆ 'ಕ್ಷ' ಅಕ್ಷರಗಳು ಈ ಪ್ರಮಾಣವಾಗಿ 5 ತಾಸು ಹಾಗೂ ಅಲಿಯು ಒಂದು ತಾಸಿಗೆ 'ಮ' ಅಕ್ಷರಗಳು ಈ ಪ್ರಮಾಣವಾಗಿ 6 ತಾಸು ಟಂಕಲೇಖನ ಮಾಡಿದರು. ಇಬ್ಬರೂ ಕೂಡಿ ಎಷ್ಟು ಅಕ್ಷರಗಳ ಟಂಕಲೇಖನ ಮಾಡಿದರು?

(1) 5ಕ್ಷ × 6ಮ (2) 6ಮ – 5ಕ್ಷ

(3) 5ಮ × 6ಕ್ಷ (4) 5ಕ್ಷ + 6ಮ

61. ಒಂದು ಹಾಲಿನ ಡೇರಿಯಲ್ಲಿ 1ಲೀಟರಿನ 300 ಚೀಲಗಳು ಹಾಗೂ 500 ಮಿಲಿ ಲೀಟರದ 600 ಚೀಲಗಳಿದ್ದವು. ಆ ದಿನ 560 ಲೀಟರ್ ಹಾಲಿನ ವಿತರಣೆ ಮಾಡಲಾಯಿತು. ಹಾಗಾದರೆ ಒಟ್ಟು ಎಷ್ಟು ಲೀಟರ್ ಹಾಲು ಉಳಿಯಿತು?

(1) 40 ಲೀಟರ್ (2) 50 ಲೀಟರ್

(3) 500 ಲೀಟರ್ (4) 30 ಲೀಟರ್

ಕೇವಲ ಕಚ್ಚಾ ಕೆಲಸಕ್ಕಾಗಿ

62. Javed purchased 10 boxes of Mangoes at the rate of ₹ 3000 each. After some days Mangoes got spoiled so he sold them at ₹ 1200 per box. What is the percentage of loss he got?

(1) 40% (2) 60%

(3) 50% (4) 70%

63. Arrange the following in descending order. Find the difference between the second last and fourth last number. Which digit will occur at the tens place in this difference?

40273, 41237, 41260, 42106, 41238

(1) 4 (2) 3

(3) 2 (4) 9

64. 2 gross papers out of 2 rim of papers is used for printing, how many dozen papers are left?

(1) 672 (2) 56

(3) 66 (4) 288

65. Select the correct statement.

(1) Smallest divisor of 15 is 3.

(2) Only three divisors of 18 are even numbers.

(3) Any prime number has more than 2 divisors.

(4) Number of divisors is unlimited.

SPACE FOR ROUGH WORK

62. ಜಾವೇದನು 3000 ರೂಪಾಯಿಗೆ ಒಂದರಂತೆ ಹತ್ತು ಮಾವಿನ ಪೆಟ್ಟಿಗೆಗಳನ್ನು ಕೊಂಡನು. ಕೆಲವು ದಿನಗಳನಂತರ ಅದರಲ್ಲಿಯ ಕೆಲವು ಹಣ್ಣುಗಳು ಕೆಟ್ಟಿದ್ದರಿಂದ 1200 ರೂಪಾಯಿಗೆ ಒಂದರಂತೆ ಎಲ್ಲ ಪೆಟ್ಟಿಗೆಗಳನ್ನು ಮಾರಿದನು ಹಾಗಾದರೆ ಈ ವ್ಯವಹಾರದಲ್ಲಿ ಅವನಿಗೆ ಶೇಕಡಾ ಎಷ್ಟು ಹಾನಿಯಾಯಿತು?

(1) 40% (2) 60%

(3) 50% (4) 70%

63. ಕೆಳಗಿನ ಸಂಖ್ಯೆಗಳನ್ನು ಇಳಿಕೆಕ್ರಮದಲ್ಲಿ ಬರೆಯಿರಿ. ಕೊನೆಯಿಂದ ಬರುವ ಎರಡನೆಯ ಹಾಗೂ ನಾಲ್ಕನೆಯ ಸಂಖ್ಯೆಯಲ್ಲಿಯ ವ್ಯತ್ಯಾಸವನ್ನು ತೆಗೆದಾಗ ದಶಕದಸ್ಥಾನದಲ್ಲಿ ಯಾವ ಅಂಕಿ ಬರುವುದು?

40273, 41237, 41260, 42106, 41238

(1) 4 (2) 3

(3) 2 (4) 9

64. ಎರಡು ರಿಮ್ ಕಾಗದಗಳಪೈಕಿ ಎರಡು ಗ್ರೋಸ್ ಕಾಗದವನ್ನು ಮುದ್ರಣಕ್ಕಾಗಿ ಉಪಯೋಗಿಸಿದರೆ ಎಷ್ಟು ಡಜನ್ ಕಾಗದ ಉಳಿಯುವವು?

(1) 672 (2) 56

(3) 66 (4) 288

65. ಕೆಳಗಿನವುಗಳಲ್ಲಿಯ ಯಾವ ವಿಧಾನವು ಯೋಗ್ಯವಾಗಿದೆ?

(1) 15ರ ಎಲ್ಲಕ್ಕೂ ಚಿಕ್ಕ ವಿಭಾಜಕ ಮೂರು ಇದೆ.

(2) 18ರ ಎಲ್ಲ ವಿಭಾಜಕಗಳಲ್ಲಿ ಕೇವಲ ಮೂರು ವಿಭಾಜಕಗಳು ಸಮಸಂಖ್ಯೆ ಇವೆ.

(3) ಯಾವುದೇ ಮೂಲಸಂಖ್ಯೆಗೆ ಎರಡಕ್ಕಿಂತ ಹೆಚ್ಚು ವಿಭಾಜಕಗಳಿರುತ್ತವೆ.

(4) ವಿಭಾಜಕಗಳ ಸಂಖ್ಯೆ ಮರ್ಯಾದಿತವಾಗಿರುವುದಿಲ್ಲ.

ಕೇವಲ ಕಚ್ಚಾ ಕೆಲಸಕ್ಕಾಗಿ

66. Arrange the multiples of 41 in ascending order. Which is the fourth even number in this set?

(1) 328 (2) 164

(3) 410 (4) 246

67. What is the perimetre of the given figure, when length of each square is 1.5 cm?

(1) 15 cm (2) 9 cm

(3) 39 cm (4) 36 cm

68. How many one digit and two digit square numbers contain 1, 6 and 9 at any place?

(1) 6 (2) 9

(3) 7 (4) 8

69. What is the simple interest on ₹ 3000 at the rate of 10 p.c.p.a for 3 years?

(1) ₹ 300 (2) ₹ 600

(3) ₹ 800 (4) ₹ 900

SPACE FOR ROUGH WORK

66. 41 ರಿಂದ ವಿಭಾಜ್ಯವಿರುವ ಸಮಸಂಖ್ಯೆಗಳನ್ನು ಏರಿಕೆ ಕ್ರಮದಲ್ಲಿ ಬರೆದಾಗ ನಾಲ್ಕನೆಯ ಸ್ಥಾನದಲ್ಲಿ ಬರುವ ಸಮಸಂಖ್ಯೆ ಯಾವುದು?

(1) 328 (2) 164

(3) 410 (4) 246

67. ಕೊಟ್ಟ ಆಕೃತಿಯಲ್ಲಿ ಪ್ರತಿಯೊಂದು ಚೌರಸದ ಉದ್ದ 1.5ಸೆಮೀ. ಇದ್ದರೆ ಆ ಆಕೃತಿಯ ಪರಿಮಿತಿ ಎಷ್ಟು?

(1) 15 ಸೆಮೀ (2) 9 ಸೆಮೀ

(3) 39 ಸೆಮೀ (4) 36 ಸೆಮೀ

68. 1, 6 ಹಾಗೂ 9 ಈ ಅಂಕಿಗಳ ಯಾವುದೇ ಸ್ಥಾನದಲ್ಲಿರುವ ಒಂದಂಕಿ ಹಾಗೂ ಎರಡಂಕಿಗಳ ಒಟ್ಟು ವರ್ಗಸಂಖ್ಯೆಗಳೆಷ್ಟು?

(1) 6 (2) 9

(3) 7 (4) 8

69. ಪ್ರ.ವ.ಪ್ರ.ಶೇ 10 ದರದಂತೆ 3000 ರೂಪಾಯಿಯ ಅಸಲಿನ 3 ವರ್ಷದ ಸರಳಬಡ್ಡಿ ಎಷ್ಟು?

(1) 300 ರೂಪಾಯಿಗಳು (2) 600 ರೂಪಾಯಿಗಳು

(3) 800 ರೂಪಾಯಿಗಳು (4) 900 ರೂಪಾಯಿಗಳು

ಕೇವಲ ಕಚ್ಚಾ ಕೆಲಸಕ್ಕಾಗಿ

70. Which of the following indicates different fraction formed by shaded portion?

(1) 

(2) 

(3) 

(4) 

71. If an article of ₹ 1000 is sold at 30% profit then how many rupees profit is gained in the transaction?

(1) ₹ 1030
(2) ₹ 150
(3) ₹ 300
(4) ₹ 1300

72. Lokesh and Roshan are working in a same company. Roshan received salary of rupees Fifteen and half thousand for 1 month and Lokesh received salary of rupees quarter to Eighteen thousand for same month. Salary of Lokesh is more by how much than Roshan's salary?

(1) Quarter and two thousand rupees.
(2) Two thousand and fifty rupees.
(3) Twenty two hundred rupees.
(4) Twenty three and half hundred rupees.

SPACE FOR ROUGH WORK

70. ಕೆಳಗಿನವುಗಳಲ್ಲಿಯ ಯಾವ ಆಕೃತಿಯಲ್ಲಿಯ ರೇಖಾಂಕಿತ ಭಾಗವು ಬೇರೆ ಅಪೂರ್ಣಾಂಕವನ್ನು ತೋರಿಸುತ್ತದೆ?

(1) 

(2) 

(3) 

(4) 

71. 1000 ರೂಪಾಯಿಯ ವಸ್ತುವನ್ನು 30% ಲಾಭ ತೆಗೆದುಕೊಂಡು ಮಾರಿದಾಗ ಎಷ್ಟು ರೂಪಾಯಿಯ ಲಾಭವಾಗುವುದು?

(1) 1030 ರೂಪಾಯಿಗಳು
(2) 150 ರೂಪಾಯಿಗಳು
(3) 300 ರೂಪಾಯಿಗಳು
(4) 1300 ರೂಪಾಯಿಗಳು

72. ಲೊಕೇಶ ಹಾಗೂ ರೋಶನ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ರೋಶನನಿಗೆ ಒಂದು ತಿಂಗಳಿಗೆ ಹದಿನೈದುವರೆ ಸಾವಿರ ರೂಪಾಯಿ ಹಾಗೂ ಲೊಕೇಶನಿಗೆ ಹದಿನೇಳು ಮುಕ್ಕಾಲು ಸಾವಿರ ರೂಪಾಯಿಗಳು ದೊರೆತವು. ಹಾಗಾದರೆ ಆ ತಿಂಗಳಿನಲ್ಲಿ ಲೊಕೇಶನಿಗೆ ರೋಶನನಿಗಿಂತ ಎಷ್ಟು ರೂಪಾಯಿಗಳು ಹೆಚ್ಚಿಗೆ ದೊರೆತವು?

(1) ಎರಡು ಕಾಲು ಸಾವಿರ ರೂಪಾಯಿಗಳು
(2) ಎರಡು ಸಾವಿರದಾ ಐವತ್ತು ರೂಪಾಯಿಗಳು
(3) ಇಪ್ಪತ್ತೆರಡು ನೂರು ರೂಪಾಯಿಗಳು
(4) ಇಪ್ಪತ್ಮೂರು ಸಾವಿರದಾ ಐದುನೂರು ರೂಪಾಯಿಗಳು

ಕೇವಲ ಕಚ್ಚಾ ಕೆಲಸಕ್ಕಾಗಿ

73. Height of two pillars is 117 cm and 105 cm respectively. What is the height of the pillar formed by joining these two pillars?

(1) 2.22 mm (2) 222 m

(3) 2.22 cm (4) 2.22 m

Note for Question 74 and 75.

Answer the following questions on the basis of pictographical information given below. Pictograph indicates the number of students learning to play musical instruments.

Instrument	**Number of students**
Tabla	
Harmonium	
Flute	
Guitar	

Scale : 1 picture = 10 students

74. Total how many students are learning to play musical instrument?

(1) 150 (2) 160

(3) 140 (4) 130

75. Which instrument is learnt by least number of students?

(1) Flute (2) Guitar

(3) Tabla (4) Harmonium

SPACE FOR ROUGH WORK

73. ಎರಡು ಕಂಬಗಳ ಎತ್ತರ ಅನುಕ್ರಮವಾಗಿ 117ಸೆಮೀ ಹಾಗೂ 105ಸೆಮೀ ಇದೆ ಎರಡೂ ಕಂಬಗಳನ್ನು ಒಂದನ್ನೊಂದು ಜೋಡಿಸಿ ಒಂದೇ ಕಂಬವನ್ನು ತಯಾರಿಸಿದರೆ ಆ ಕಂಬದ ಒಟ್ಟು ಎತ್ತರ ಎಷ್ಟು?

(1) 2.22 ಮಿಮೀ (2) 222 ಮೀ

(3) 2.22 ಸೆಮೀ (4) 2.22 ಮೀ

ಪ್ರ.ಕ್ರ. 74 ಹಾಗೂ 75ಕ್ಕಾಗಿ ಸೂಚನೆ:-

ಕೆಳಗಿನ ಚಿತ್ರರೂಪ ಮಾಹಿತಿಯ ಆಧಾರದಿಂದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
ವಾದ್ಯ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಕೊಡಲಾಗಿದೆ.

ವಾದ್ಯ	ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ
ತಬಲಾ	☺ ☺ ☺ ☺ ☺ ☺
ಹಾರ್ಮೋನಿಯಮ್	☺ ☺ ☺
ಕೊಳಲು	☺ ☺
ಗಿಟಾರ್	☺ ☺ ☺ ☺ ☺

ಪ್ರಮಾಣ:- 1 ಚಿತ್ರ = 10 ವಿದ್ಯಾರ್ಥಿಗಳು

74. ಒಟ್ಟು ಎಷ್ಟು ವಿದ್ಯಾರ್ಥಿಗಳು ವಾದ್ಯವನ್ನು ಕಲಿಯುತ್ತಿದ್ದಾರೆ?

(1) 150 (2) 160

(3) 140 (4) 130

75. ಯಾವ ವಾದ್ಯವನ್ನು ಕಲಿಯುವ ವಿದ್ಯಾರ್ಥಿ ಸಂಖ್ಯೆಯು ಕಡಿಮೆ ಇದೆ?

(1) ಕೊಳಲು (2) ಗಿಟಾರ

(3) ತಬಲಾ (4) ಹಾರ್ಮೋನಿಯಮ್

ಕೇವಲ ಕಚ್ಚಾ ಕೆಲಸಕ್ಕಾಗಿ

<u>ಕೇವಲ ಕಚ್ಚಾ ಕೆಲಸಕ್ಕಾಗಿ</u>